

ಮಾತನಾಡಿ ಹಗುರಾಗುವುದು ಅಗತ್ಯವಾಗಿರುತ್ತದೆ ಎಂದು ಹೇಳುತ್ತಾರೆ ವಸುಧೇಂದ್ರ.

ಹೌದು, ಕಷ್ಟಗಳನ್ನು, ಇಕ್ಕಟ್ಟಿನ ಪರಿಸ್ಥಿತಿಗಳನ್ನು ಕೇಳಿ ಕೇಳಿ ಮನಸ್ಸು ಒರಟಾಗದಂತೆ ಕಾಪಾಡಿಕೊಳ್ಳಬೇಕಾಗುತ್ತದೆ. ಆಲಿಸುವಿಕೆಯ ಗುಣವೊಂದು ಅಳಿಸಿಹೋಗದಂತೆ ಸಮಾಲೋಚಕರು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಚಿಕಿತ್ಸೆಯನ್ನು ಕೊಡುವ ಸ್ಥಾನದಲ್ಲಿರುವವರು, ಪರಿಹಾರ ರೂಪದ ಸ್ಥಾನದಲ್ಲಿ ಇರುವವರು ನಿರಾಶಾವಾದದ ಛಾಯೆಯಡಿಗೆ ಬರಬಾರದು. 'ಎಷ್ಟು ಮಾಡಿದರೂ ಅಷ್ಟೆ, ಇದೆಲ್ಲ ನೋಡಿ ನೋಡಿ ಸಾಕಾಗಿದೆ... ಏನೋ ಒಂದು ಹೇಳಿದರಾಯಿತು ಎಂದು ಮನಸ್ಸು ಯಾವತ್ತು ರೋಸಿ ಹೋಗಿರುತ್ತದೋ, ಅಂದು ಆ ವೃತ್ತಿಯನ್ನು ಕೈಬಿಡುವುದು ಉತ್ತಮ ನಿರ್ಧಾರವಾಗಿರುತ್ತದೆ' ಎನ್ನುತ್ತಾರೆ ಲಲಿತಾ.

ಲಲಿತಾ ಅವರದ್ದೂ ಬಹಳ ಕೆಟ್ಟ ಅನುಭವ. ಚಾರಿಟಬಲ್ ಟ್ರಸ್ಟ್ ನಡೆಸುವ ಆಸ್ಪತ್ರೆಯೊಂದರಲ್ಲಿ ಪ್ರಸಿದ್ಧ ಆಪ್ತ ಸಮಾಲೋಚಕರೊಬ್ಬರ ಬಳಿಗೆ ಅವರು ಮಗಳನ್ನು ಕರೆದೊಯ್ದಿದ್ದರು. ಮಗಳ ಸಮಸ್ಯೆ ಪ್ರೀತಿ–ಪ್ರೇಮಕ್ಕೆ ಸಂಬಂಧಿಸಿದ್ದೇನಲ್ಲ. ಆದರೆ ಹುಡುಗರಿಗೆ ಸಂಬಂಧಿಸಿದ್ದು. ತರಗತಿಗಳಿರಲಿ, ಕಾರ್ಯಕ್ರಮಗಳಿರಲಿ ಅಥವಾ ಬೇರೆ ಯಾವುದೇ ಚಟುವಟಿಕೆಗಳಿರಲಿ, ಮಗಳು ಹುಡುಗರಿಗೆ ಅಂಟಿಕೊಂಡೇ ಇರುವುದು ಲಲಿತಾಗೆ ಇಷ್ಟವಾಗುತ್ತಿರಲಿಲ್ಲ. 'ಹೀಗೆಲ್ಲ ವರ್ತಿಸಬಾರದು ಮಗಳೇ' ಎಂದು ಮಗಳಿಗೆ ಬುದ್ಧಿ ಹೇಳಿ ಬೈಯುವ ಲಲಿತಾಳನ್ನೇ ಎಲ್ಲರೂ ಪ್ರಶ್ನಿಸಲು ಶುರು ಮಾಡಿದರು. 'ನಿನಗೆ ಈಗಿನ ಕಾಲದ ನಡೆ ಗೊತ್ತಿಲ್ಲ. ಸ್ವಲ್ಪ ಸುಮ್ಮನಿರು...' ಎಂದು ಬುದ್ಧಿ ಮಾತು ಹೇಳಲಾರಂಭಿಸಿದರು. ಯಾವಾಗ ಮಗಳ ಕಾಲೇಜಿನ ಉಪನ್ಯಾಸಕರಿಂದ ದೂರಿನ ಕರೆಗಳು ಬರಲು ಶುರುವಾದವೋ, 'ಇದು ಸರಳ ವಿಚಾರವಲ್ಲ' ಎಂಬುದು ಲಲಿತಾಳ ಅರಿವಿಗೆ ಬಂತು. ಅಷ್ಟೇ ಅಲ್ಲ, ಪ್ರಾಂಶುಪಾಲರು ಲಲಿತಾಳನ್ನು ಕರೆದು, 'ಇಲ್ಲೇನೋ ಬೇರೆ ಸಮಸ್ಯೆಯಿದೆ ಗಮನಿಸಿ...' ಎಂದು ಕಿವಿಮಾತು ಹೇಳಿದರು. ಆಪ್ತ ಸಮಾಲೋಚಕರನ್ನು ಭೇಟಿಯಾಗಲು ನಿರ್ಧರಿಸಿದ ಲಲಿತಾ, ಮಗಳ ಮನಸ್ಸು ಒಲೈಸಿ ಭೇಟಿಯಾಗಲು ನಿರ್ಧರಿಸಿದಳು.

'ನಿನ್ನ ಕೈ ಬರಹ ಚೆನ್ನಾಗಿಲ್ಲದೇ ಇರುವುದರಿಂದ ಅಂಕಗಳು ಕಡಿಮೆ ಬರುತ್ತಿವೆ. ಇದಕ್ಕೊಂದು ಚಟುವಟಿಕೆ ಹೇಳಿಕೊಡುತ್ತಾರೆ...' ಎಂದು ನೆಪ ಮಾಡಿ ಸಮಾಲೋಚಕರನ್ನು ಭೇಟಿ ಮಾಡಿದಳು. ಬಹಳ ಸುಂದರ ವ್ಯಕ್ತಿತ್ವದ ಸಮಾಲೋಚಕರನ್ನು ನೋಡಿದ ಕೂಡಲೇ ಮಗಳಿಗೂ ಖುಷಿಯಾಯಿತು. ಆದರೆ ಮಗಳು ತನ್ನ ಅಂತರಂಗವನ್ನು ಬಿಚ್ಚಿ ಮಾತನಾಡುತ್ತಾಳೆ ಎಂಬ ಅಮ್ಮನ ನಿರೀಕ್ಷೆ ಹುಸಿಯಾಯಿತು. ಯಾಕೆಂದರೆ, ಸುಮಾರು ಹನ್ನೆರಡು ನಿಮಿಷಗಳ ಕಾಲ ಸಮಾಲೋಚಕರೇ ಬುದ್ಧಿ ಮಾತು ಹೇಳಲು ಶುರು ಮಾಡಿದರು. ಅಮ್ಮ ಹೇಳುತ್ತಿದ್ದ ಮಾತುಗಳನ್ನೇ ಸಮಾಲೋಚಕರೂ ಹೇಳುತ್ತಿದ್ದುದನ್ನು ಕಂಡು, ಮಗಳು ಸುಮ್ಮನೇ ನಗುತ್ತ ಕುಳಿತಿದ್ದಳು.

ಪಟ್ಟು ಬಿಡದ ಲಲಿತಾ, ಮತ್ತೊಂದು ದಿನ ತಾನೊಬ್ಬಳೇ ಸಮಾಲೋಚಕರನ್ನು ಕಂಡು ಮಗಳ ಸಮಸ್ಯೆಯನ್ನು ಹೇಳಿಕೊಳ್ಳಲು ನಿರ್ಧರಿಸಿದಳು. ಆದರೆ ಅವಳು ಅಷ್ಟು ಕೆಟ್ಟ ಸಂದರ್ಭವನ್ನು ಎದುರಿಸಬೇಕಾಗುತ್ತದೆ ಎಂದು ಅಂದುಕೊಂಡಿರಲಿಲ್ಲ. 'ನಿಮ್ಮ ಮಗಳು ಕಳ್ಳಿಯೋ ಸುಳ್ಳಿಯೋ ಆದರೆ ಅದನ್ನು ಸರಿಪಡಿಸಲು ನಮ್ಮ ಬಳಿ ಮಾತ್ರೆಯೊಂದು ಸಿದ್ಧವಾಗಿರುವುದಿಲ್ಲ ನೋಡಿ. ಕೆಟ್ಟ ಮನುಷ್ಯರೂ ಈ ಜಗತ್ತಿನಲ್ಲಿ ಇರುತ್ತಾರೆ. ನೀವು ಅದನ್ನು ಒಪ್ಪಿಕೊಳ್ಳಬೇಕಷ್ಟೇ...' ಎಂದು ಹೇಳಿ, 'ನೆಕ್ಸ್ಟ್' ಎಂದು ಹೇಳಿದರು.

ಲಲಿತಾಳಿಗೆ ತನ್ನ ದೇಹವನ್ನು ಸಮತೋಲನದಲ್ಲಿ ಇಟ್ಟುಕೊಳ್ಳಲು ಸ್ವಲ್ಪ ಸಮಯವೇ ಬೇಕಾಯಿತು. ಕೆಟ್ಟ ಮಗಳಾದರೂ ಒಪ್ಪಿಕೊಳ್ಳಲಾರೆ ಎಂದೇನೂ ಅವಳು ಅಂದುಕೊಂಡಿರಲಿಲ್ಲ. ಆದರೆ ಸಮಾಲೋಚಕರ ಒರಟು ಮಾತುಗಳು ಅವಳೆದೆಯನ್ನು ಇರಿದ ಹಾಗಾಗಿತ್ತು.

ಅವಳು ಮಾಡಿದ ಮೊದಲ ಕೆಲಸವೆಂದರೆ ಮಗಳ ಜೊತೆಗೆ ಒಂದು ಪುಟ್ಟ ಟ್ರಿಪ್ ಹೋಗಿದ್ದು. ಟ್ರಿಪ್‌ನಲ್ಲಿ ಒಂದು ಘಟನೆ ನಡೆಯಿತು. ಶಿಲ್ಪಗಳಿದ್ದ ದೇವಸ್ಥಾನದ ಎದುರು ನಿಂತು ಮೊಬೈಲ್‌ನಲ್ಲಿ ಅಮ್ಮ ಮಗಳಿಬ್ಬರೂ ಫೋಟೊಗಳನ್ನು ತೆಗೆದುಕೊಳ್ಳುತ್ತಿದ್ದರು. ಒಂದೆರಡು ಫೋಟೊಗಳನ್ನು ತೆಗೆದುಕೊಂಡ ಬಳಿಕ, 'ಒಂದು ರೀಲ್ ಮಾಡೋಣ್ವಾ...' ಎಂದು ಕೇಳಿದಳು ಲಲಿತಾ. ಮಗಳು ಜೋರಾಗಿ ಅಳಲು ಶುರು ಮಾಡಿದಳು. ತಬ್ಬಿಬ್ಬಾದ ಅಮ್ಮ